ANANTHKUMAR PRATISHTHANA

# ಅನಂತಪಥ

ಪುಟ 5
ಶ್ರದ್ಧಾಂಜಲಿ
ನುಡಿನಮನ



ಸಂಪುಟ - 7 ಜುಲೈ - 2026 ಸಂಚಿಕೆ - 73

## ಸೆಮಿಕಂಡಕ್ಟರ್ ಸ್ವಾವಲಂಬನೆಯತ್ತ ಭಾರತ: ಅನಂತಕುಮಾರ್ ಅವರ ತಾಂತ್ರಿಕ ದೂರದೃಷ್ಟಿ




ಇಪ್ಪತ್ತೊಂದನೇ ಶತಮಾನದಲ್ಲಿ ರಾಷ್ಟ್ರಗಳ ಶಕ್ತಿಯನ್ನು ಅಳೆಯುವ ಮಾನದಂಡಗಳೇ ಬದಲಾಗಿವೆ. ಹಿಂದೆ ಭೂಮಿ, ಚಿನ್ನ, ತೈಲ ಮತ್ತು ನೈಸರ್ಗಿಕ ಸಂಪನ್ಮೂಲಗಳು ಒಂದು ದೇಶದ ಬಲವನ್ನು ನಿರ್ಧರಿಸುತ್ತಿದ್ದವು. ಇಂದು ಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯೇ ಅಭಿವೃದ್ಧಿಯ ಹೊಸ ಮಾನದಂಡಗಳಾಗಿವೆ. ಕೃತಕ ಬುದ್ಧಿಮತ್ತೆ (AI), 5G, ರೋಬೋಟಿಕ್ಸ್, ಬಾಹ್ಯಾಕಾಶ ತಂತ್ರಜ್ಞಾನ, ವೈದ್ಯಕೀಯ ಸಾಧನಗಳು, ವಿದ್ಯುತ್ ವಾಹನಗಳು, ರಕ್ಷಣಾ ವ್ಯವಸ್ಥೆಗಳು — ಇವೆಲ್ಲದರ ಹೃದಯಭಾಗದಲ್ಲಿರುವುದು ಒಂದು ಸಣ್ಣ ಚಿಪ್, ಅಂದರೆ ಸೆಮಿಕಂಡಕ್ಟರ್.

ಇಂದು ವಿಶ್ವದ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಸ್ಪರ್ಧೆ ಕೇವಲ ಮಾರುಕಟ್ಟೆಯ ಸ್ಪರ್ಧೆಯಲ್ಲ; ಅದು ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವ ಸ್ಪರ್ಧೆ.

ಈ ಹಿನ್ನೆಲೆಯಲ್ಲಿ ಭಾರತವೂ ತನ್ನದೇ ಆದ ಸೆಮಿಕಂಡಕ್ಟರ್ ಉತ್ಪಾದನಾ ಸಾಮರ್ಥ್ಯವನ್ನು ನಿರ್ಮಿಸುವ ದಿಕ್ಕಿನಲ್ಲಿ ದೃಢ ಹೆಜ್ಜೆಗಳನ್ನು ಇಡುತ್ತಿದೆ. ಇದು ಕೇವಲ ಕೈಗಾರಿಕಾ ಬೆಳವಣಿಗೆಯ ವಿಷಯವಲ್ಲ; ಆರ್ಥಿಕ ಸ್ವಾವಲಂಬನೆ, ರಾಷ್ಟ್ರೀಯ ಭದ್ರತೆ, ಉದ್ಯೋಗ ಸೃಷ್ಟಿ ಮತ್ತು ಭವಿಷ್ಯದ ಅಭಿವೃದ್ಧಿಯ ಪ್ರಶ್ನೆ.

**ಸೆಮಿಕಂಡಕ್ಟರ್ ಏಕೆ ಇಷ್ಟು ಮಹತ್ವದ್ದು?**

ನಾವು ಪ್ರತಿದಿನ ಬಳಸುವ ಮೊಬೈಲ್ ಫೋನ್, ಲ್ಯಾಪ್‌ಟಾಪ್, ಕಾರು, ಟಿವಿ, ವೈದ್ಯಕೀಯ ಉಪಕರಣಗಳು, ಬ್ಯಾಂಕಿಂಗ್ ವ್ಯವಸ್ಥೆ, ಉಪಗ್ರಹಗಳು, ಡ್ರೋನ್‌ಗಳು, ಕ್ಷಿಪಣಿ ವ್ಯವಸ್ಥೆಗಳು — ಇವೆಲ್ಲವೂ ಸೆಮಿಕಂಡಕ್ಟರ್ ಚಿಪ್‌ಗಳ ಮೇಲೆ ಅವಲಂಬಿತವಾಗಿವೆ. ಕೋವಿಡ್ ನಂತರ ಉಂಟಾದ ಜಾಗತಿಕ ಚಿಪ್ ಕೊರತೆಯು ಒಂದು ವಿಷಯವನ್ನು ಸ್ಪಷ್ಟಪಡಿಸಿತು — ಸೆಮಿಕಂಡಕ್ಟರ್ ಉತ್ಪಾದನೆ ಇಲ್ಲದೆ ಆಧುನಿಕ ಆರ್ಥಿಕತೆಯ ಚಕ್ರವೇ ನಿಂತುಹೋಗಬಹುದು.

ಇದನ್ನೇ ಮನಗಂಡು ಭಾರತ ಸರ್ಕಾರ ದೇಶವನ್ನು ಜಾಗತಿಕ ಸೆಮಿಕಂಡಕ್ಟರ್ ಉತ್ಪಾದನಾ ಕೇಂದ್ರವನ್ನಾಗಿ ರೂಪಿಸುವ ಗುರಿಯೊಂದಿಗೆ ಮಹತ್ವಾಕಾಂಕ್ಷಿ ಯೋಜನೆಗಳನ್ನು ಕೈಗೊಂಡಿದೆ. ದೇಶದ ವಿವಿಧ ಭಾಗಗಳಲ್ಲಿ ಚಿಪ್ ಉತ್ಪಾದನಾ ಘಟಕಗಳು, ವಿನ್ಯಾಸ ಕೇಂದ್ರಗಳು ಮತ್ತು ಸಂಶೋಧನಾ ಸಂಸ್ಥೆಗಳು ರೂಪುಗೊಳ್ಳುತ್ತಿವೆ. ಇದರಿಂದ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ.

ಬೆಂಗಳೂರು – ಭಾರತದ ತಂತ್ರಜ್ಞಾನ ರಾಜಧಾನಿ ಸೆಮಿಕಂಡಕ್ಟರ್ ಕ್ರಾಂತಿಯ ಕುರಿತು ಮಾತನಾಡುವಾಗ ಬೆಂಗಳೂರಿನ ಪಾತ್ರವನ್ನು ಮರೆಯಲು ಸಾಧ್ಯವಿಲ್ಲ. ದಶಕಗಳ ಕಾಲ ಐಟಿ, ಎಲೆಕ್ಟ್ರಾನಿಕ್ಸ್, ಏರೋಸ್ಪೇಸ್, ಜೈವಿಕ ತಂತ್ರಜ್ಞಾನ ಮತ್ತು ಸಂಶೋಧನೆಯ ಕೇಂದ್ರವಾಗಿ ಬೆಳೆದಿರುವ ಬೆಂಗಳೂರು ಇಂದು ವಿಶ್ವದ ಪ್ರಮುಖ ಚಿಪ್ ವಿನ್ಯಾಸ ಸಂಸ್ಥೆಗಳ ನೆಲೆಯಾಗಿದೆ.

ಪುಟ 4 ರಲ್ಲಿ ಮುಂದುವರಿದಿದೆ

## 12 ಗಂಟೆ, 25,000 ಸಸಿ: 'ಅದಮ್ಯ ಚೇತನ'ದ ಮಹಾ ವೃಕ್ಷಾರೋಪಣ ಅಭಿಯಾನ ಯಶಸ್ವಿ





ಬೆಂಗಳೂರು ನಗರದಲ್ಲಿ ದಿನೇ ದಿನೇ ಕುಸಿಯುತ್ತಿರುವ ಹಸಿರು ಹೊದಿಕೆಯನ್ನು ವರ್ಧಿಸಲು ಮತ್ತು 'ಒಬ್ಬರಿಗೆ ಒಂದು ಮರ' ಎಂಬ ಪರಿಸರ ಜಾಗೃತಿಯ ಆಶಯವನ್ನು ಸಾಕಾರಗೊಳಿಸಲು 'ಅದಮ್ಯ ಚೇತನ' ಸಂಸ್ಥೆಯು 2026ರ ಜೂನ್ 27ರಂದು ಬೃಹತ್ ವೃಕ್ಷಾರೋಪಣ ಅಭಿಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (BDA) ನಗರದಾದ್ಯಂತ ಆಯೋಜಿಸಿದ್ದ 15 ಲಕ್ಷ ಸಸಿ ನೆಡುವ ಬೃಹತ್ ಯೋಜನೆ ಹಾಗೂ ಗಿನ್ನೆಸ್ ದಾಖಲೆಯ ಪ್ರಯತ್ನದ ಭಾಗವಾಗಿ, ಅದಮ್ಯ ಚೇತನ ಸಂಸ್ಥೆಗೆ 12 ಗಂಟೆಗಳ ಅವಧಿಯಲ್ಲಿ 25,000 ಸಸಿಗಳನ್ನು ನೆಟ್ಟು, ಮುಂದಿನ 3 ವರ್ಷಗಳ ಕಾಲ ಅವುಗಳನ್ನು ಪೋಷಿಸುವ ಸವಾಲಿನ ಜವಾಬ್ದಾರಿಯನ್ನು ವಹಿಸಲಾಗಿತ್ತು. ಕಳೆದೆರಡು ದಶಕಗಳಿಂದ ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಸಂಸ್ಥೆಯು ಈ ಹೊಣೆಗಾರಿಕೆಯನ್ನು ಅತ್ಯಂತ ಉತ್ಸಾಹದಿಂದ ಸ್ವೀಕರಿಸಿ ಕಾರ್ಯಪ್ರವೃತ್ತವಾಯಿತು.

ಅಭಿಯಾನದ ಆರಂಭಿಕ ಹಂತದಲ್ಲಿ ಸ್ಥಳಾವಕಾಶದ ಹಂಚಿಕೆಯಲ್ಲಿ ಕೆಲವು ತಾಂತ್ರಿಕ ವ್ಯತ್ಯಾಸಗಳು ಮತ್ತು ಸವಾಲುಗಳು ಎದುರಾದರೂ, ಅಂತಿಮವಾಗಿ ಬನಶಂಕರಿ 6ನೇ ಹಂತದ ತುರಹಳ್ಳಿ ಅರಣ್ಯದಂಚಿನ ಮೂರು ವಿಭಾಗಗಳಲ್ಲಿ ಭೂಮಿಯನ್ನು ಗುರುತಿಸಲಾಯಿತು. ಕೇವಲ ಕೆಲವೇ ದಿನಗಳ ಕಾಲಾವಕಾಶವಿದ್ದರೂ, ಸಂಸ್ಥೆಯು ಜೆಸಿಬಿ ಯಂತ್ರಗಳ ಮೂಲಕ ಭೂಮಿಯನ್ನು ಸಮತಟ್ಟುಗೊಳಿಸಿ, ಒಂದೂವರೆ ಅಡಿ ಆಳದ ಟ್ರೆಂಚ್‌ಗಳನ್ನು ನಿರ್ಮಿಸಿ ಸಸಿ ನೆಡಲು ಮಣ್ಣನ್ನು ಹದಗೊಳಿಸಿತು.

ಪುಟ 2 ರಲ್ಲಿ ಮುಂದುವರಿದಿದೆ

# ಅದಮ್ಯ ಚೇತನದ ಮಹಾ ವೃಕ್ಷಾರೋಪಣ ಅಭಿಯಾನ ಯಶಸ್ವಿ

ಪುಟ 1 ರಿಂದ













ಕೃಷಿ ಗೊಬ್ಬರಗಳ ಅಭಾವವಿದ್ದಾಗ, ಸಂಸ್ಥೆಯು ಶಾಲೆಗಳಿಂದ ಬಾಳೆಹಣ್ಣಿನ ಸಿಪ್ಪೆ ಹಾಗೂ ಮೊಟ್ಟೆಯ ಕವಚಗಳನ್ನು ಸಂಗ್ರಹಿಸಿ ನೈಸರ್ಗಿಕ ಪೋಷಕಾಂಶವಾಗಿ ಬಳಸುವ ನೂತನ ಪ್ರಯೋಗವನ್ನು ಮಾಡಿತು. ಈ ಮಹಾಕಾರ್ಯಕ್ಕಾಗಿ ಸುಮಾರು 32ಕ್ಕೂ ಹೆಚ್ಚು ಸ್ವಯಂಸೇವಾ ಸಂಸ್ಥೆಗಳು ಕೈಜೋಡಿಸಿದ್ದು, ಸಾರ್ವಜನಿಕ ನೂಕುನುಗ್ಗಲು ತಡೆಯಲು ಸ್ವಯಂಸೇವಕರನ್ನು ನಾಲ್ಕು ನಿರ್ದಿಷ್ಟ ಗೇಟ್‌ಗಳಲ್ಲಿ ವಿಂಗಡಿಸಿ, ಬೆಳಿಗ್ಗೆ 7:00 ರಿಂದ ಸಂಜೆ 7:00 ರವರೆಗೆ ನಾಲ್ಕು ಶಿಸ್ತುಬದ್ಧ ಹಂತಗಳಲ್ಲಿ ನಿಯೋಜಿಸಲಾಯಿತು

ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥರಾದ ಡಾ. ತೇಜಸ್ವಿನಿ ಅನಂತಕುಮಾರ್ ಅವರು ಜೂನ್ 27 ರಂದು ಬೆಳಿಗ್ಗೆ 6:40 ಕ್ಕೆ ಭೂಮಿಪೂಜೆ ನೆರವೇರಿಸಿ, ಪ್ರಥಮವಾಗಿ ಸಸಿ ನೆಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಸುಮಾರು 6,000 ಕ್ಕೂ ಹೆಚ್ಚು ಸ್ವಯಂಸೇವಾ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ನಿರಂತರ ಕೆಲಸದಿಂದ ಕಾರ್ಯಕರ್ತರು ಆಯಾಸಗೊಳ್ಳದಂತೆ ವಿಶ್ರಾಂತಿ ಸಮಯದಲ್ಲಿ ಸಾಂಸ್ಕೃತಿಕ ಹಾಗೂ ಸಂಗೀತ ಕಛೇರಿಯನ್ನು ಆಯೋಜಿಸಲಾಗಿತ್ತು. ತಾಪಮಾನ ಹೆಚ್ಚಿದ್ದರಿಂದ ಕುಡಿಯುವ ನೀರು, ಪ್ರಥಮ ಚಿಕಿತ್ಸೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಸ್ಥಳದಲ್ಲಿ ಕಲ್ಪಿಸಲಾಗಿತ್ತು. ಗೇಟ್‌ಗಳ ಬಳಿ ಸಸಿಗಳನ್ನು ಇರಿಸಿ, ಪ್ರತಿಯೊಬ್ಬ ಕಾರ್ಯಕರ್ತರಿಗೂ ಸುಲಭವಾಗಿ ಗಿಡ ನೆಡುವಂತೆ ವ್ಯವಸ್ಥಿತ ಆಯೋಜನೆ ಮಾಡಲಾಗಿತ್ತು.

ಸಂಜೆ 6:00 ಗಂಟೆಯ ವೇಳೆಗೆ ಬಿಡಿಎ ಅಧಿಕಾರಿಗಳು ಹಾಗೂ ಗಿನ್ನೆಸ್ ದಾಖಲೆ ಸಮಿತಿಯ ಪ್ರತಿನಿಧಿಗಳು ಸ್ಥಳ ಪರಿಶೀಲನೆ ನಡೆಸಿದರು. ತಾಂತ್ರಿಕವಾಗಿ ಸರಿಯಾಗಿ ನೆಡದಿರುವ ಹಾಗೂ ಪ್ಲಾಸ್ಟಿಕ್ ಕವರ್ ತೆರೆಯದಿರುವ ಕೆಲವು ಸಸಿಗಳನ್ನು ಗುರುತಿಸಿದ ತಕ್ಷಣವೇ, ಸಂಸ್ಥೆಯ ಕಾರ್ಯಕರ್ತರು ಯುದ್ಧೋಪಾದಿಯಲ್ಲಿ ಅವುಗಳನ್ನು ಸರಿಪಡಿಸಿದರು. ಅಂತಿಮವಾಗಿ ನಿಗದಿತ ಸಮಯ ಮುಕ್ತಾಯಗೊಳ್ಳುವಷ್ಟರಲ್ಲಿ, ಅಂದರೆ ಸಂಜೆ 7:00 ಗಂಟೆಗೆ BDA ಅಧಿಕಾರಿಗಳು ಅದಮ್ಯ ಚೇತನ ಸಂಸ್ಥೆಯಿಂದ ಒಟ್ಟು 25,218 ಸಸಿಗಳನ್ನು ಯಶಸ್ವಿಯಾಗಿ ನೆಡಲಾಗಿದೆ ಎಂದು ಅಧಿಕೃತವಾಗಿ ಘೋಷಿಸಿದರು. ಈ ಮೂಲಕ ಸಂಸ್ಥೆಯು ತನಗೆ ನೀಡಲಾಗಿದ್ದ 25,000 ಸಸಿಗಳ ಗುರಿಯನ್ನು ಮೀರಿ, 218 ಹೆಚ್ಚುವರಿ ಸಸಿಗಳನ್ನು ನೆಟ್ಟು ಹೊಸ ಮೈಲಿಗಲ್ಲು ಸ್ಥಾಪಿಸಿತು.

ಕಾರ್ಯಕ್ರಮದಲ್ಲಿ ಬಿಡಿಎ ಆಯುಕ್ತರಾದ ಶ್ರೀ ಪಿ. ಮಣಿವಣ್ಣನ್ ಅವರು ಭಾಗವಹಿಸಿ ಸ್ವತಃ ಗಿಡ ನೆಟ್ಟರು. ನಂತರ ಮಾತನಾಡಿದ ಅವರು, ಡಾ. ತೇಜಸ್ವಿನಿ ಅನಂತಕುಮಾರ್ ಅವರು ಪ್ರತ್ಯಕ್ಷವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಅಪರೂಪದ ಮಾರ್ಗದರ್ಶಕರು ಹಾಗೂ ಅವರೊಂದಿಗೆ ಕೆಲಸ ಮಾಡಲು ನಾವೆಲ್ಲರೂ ಧನ್ಯರು ಎಂದು ತಿಳಿಸಿದರು. ಅದಮ್ಯ ಚೇತನ ಸಂಸ್ಥೆಯು ಕೈಗೊಳ್ಳುತ್ತಿರುವ ಪರಿಸರ ಸ್ನೇಹಿ ಹಾಗೂ ವಿನೂತನ ಉಪಕ್ರಮಗಳು ಅತ್ಯಂತ ಅಭಿನಂದನೀಯವಾಗಿದ್ದು, ಸುದೀರ್ಘ ಕಾಲದಿಂದ ನಿರಂತರವಾಗಿ ಸಾರ್ವಜನಿಕ ಹಿತಾಸಕ್ತಿಯಲ್ಲಿ ತೊಡಗಿಸಿಕೊಂಡಿರುವ ಈ ಸಂಸ್ಥೆಯು ಇಡೀ ಸಮಾಜಕ್ಕೇ ಪ್ರೇರಣೆಯಾಗಿದೆ ಎಂದು ಅವರು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ. ವಿ. ಕೃಷ್ಣ ಭಟ್, ವಿವಿಧ ಸೇವಾ ಸಂಸ್ಥೆಗಳ ಮುಖ್ಯಸ್ಥರು, ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಅಪಾರ ಸಂಖ್ಯೆಯ ಸ್ವಯಂಸೇವಕರು ಉಪಸ್ಥಿತರಿದ್ದರು.









ಅನಂತಯಾನ

# ಬರಗಾಲದಲ್ಲಿ ಬೇಡಿದ ನೆರವು

1980ರ ದಶಕದ ಪ್ರಾರಂಭ. ಕರ್ನಾಟಕದ ಬಹುಭಾಗ ಕ್ಷಾಮಪೀಡಿತವಾಗಿದ್ದ ಕಾಲ. ಅದರಲ್ಲೂ ಉತ್ತರ ಕರ್ನಾಟಕದ ಜನತೆಯೂ ಜಾನುವಾರುಗಳೂ ಭೀಕರ ಬರಗಾಲದ ಬವಣೆಯಿಂದ ನರಳುವ ಸನ್ನಿವೇಶ ನಿರ್ಮಾಣವಾಗಿತ್ತು. ಅದೇ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು ಹುಬ್ಬಳ್ಳಿಯಲ್ಲಿ ಸಂಘದ ಪ್ರಾಂತ ಪ್ರಮುಖರ ಶಿಬಿರವೊಂದನ್ನು ಏರ್ಪಡಿಸಿತ್ತು, ಸರಸಂಘಚಾಲಕರಾದ ಶ್ರೀ ಬಾಳಾಸಾಹೇಬ ದೇವರಸ ಅವರು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಸರಸಂಘಚಾಲಕರ ಉಪಸ್ಥಿತಿಯಲ್ಲಿ ಬೈಠಕ್ ಒಂದರಲ್ಲಿ ಪರಿವಾರದ ಇತರ ಸಂಘಟನೆಗಳಾದ ವಿಶ್ವ ಹಿಂದೂ ಪರಿಷದ್, ಭಾರತೀಯ ಮಜದೂರ ಸಂಘ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷದ್ ಇತ್ಯಾದಿ ಸಂಘಟನೆಗಳ ಪ್ರಮುಖ ಕಾರ್ಯಕರ್ತರನ್ನು ಕರೆಯುವುದು ವಾಡಿಕೆ. ಅನಂತಕುಮಾರ್ ಆಗ ABVP ಯ ಕಾರ್ಯಕರ್ತರಾಗಿ ಭಾಗವಹಿಸಿದ್ದು ಬಹುಶಃ ಅಲ್ಲಿರುವ ಸಂಘದ ಸ್ವಯಂಸೇವಕರಲ್ಲಿ ಅತ್ಯಂತ ಕಿರಿಯರು. ಸಾಮಾನ್ಯವಾಗಿ ಸರಸಂಘಚಾಲಕರೆದುರು ಪ್ರಶ್ನೆ ಕೇಳುವ ಅಥವಾ ಸಲಹೆ ಕೊಡುವ ಧೈರ್ಯ ಹಿರಿಯರೂ ಮಾಡುವುದಿಲ್ಲ. ಪ್ರಶ್ನೋತ್ತರ ಸಮಯದಲ್ಲಿ ೧೭ ವರ್ಷದ ಯುವಕ ಅನಂತಕುಮಾರ್ ಎದ್ದುನಿಂತಾಗ ಸುತ್ತಲಿದ್ದವರಿಗೆಲ್ಲ ಅಚ್ಚರಿ. ಬೈಠಕ್ ನಲ್ಲಿ ಭಾಗವಹಿಸುವವರು ಹೀಗೆ ಎದ್ದು ನಿಂತು ಪ್ರಮುಖರೊಡನೆ ಸಂವಾದ ನಡೆಸುವ, ಪ್ರಶ್ನಿಸುವ ಸಾಧ್ಯತೆಯೇ ಇಲ್ಲ. ಈ ಯುವಕ ಏನು ಮಾತನಾಡಿಬಿಡುತ್ತಾನೋ ಎಂದು ಕೆಲವರಿಗೆ ಆತಂಕವೂ ಆಗಿರಬೇಕು


**ಅನಂತಕುಮಾರ್ ಸರಸಂಘಚಾಲಕರನ್ನು ಉದ್ದೇಶಿಸಿಕೇಳಿದ ಪ್ರಶ್ನೆ ಹೀಗಿತ್ತು:**

**"ಇಡಿಯ ಉತ್ತರ ಕರ್ನಾಟಕ ಭೀಕರ ಬರಗಾಲದಿಂದ ತತ್ತರಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಉಳಿದ ಹಲವೆಡೆ ಸಂಘವು ಬರ ಪರಿಹಾರ ಸಮಿತಿಯನ್ನು ತೆರೆದು ಸಹಾಯಹಸ್ತವನ್ನು ಚಾಚಿರುವುದುಂಟು. ಇಲ್ಲೂ ಹಾಗೆ ಪರಿಹಾರ ಕಾರ್ಯವನ್ನು ಕೈಗೊಳ್ಳಬಹುದಲ್ಲವೇ?"**

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಧ್ಯಕ್ಷರಿಗೇ ನೇರವಾಗಿ ಸಲಹೆ ನೀಡಿದ ಅನಂತಕುಮಾರರ ಧಾರ್ಷ್ಟ್ಯ ಎಲ್ಲರನ್ನೂ ಅಚ್ಚರಿಗೊಳಿಸಿತು. ಸಭೆಯಲ್ಲಿ ಮೌನ ಆವರಿಸಿತ್ತು. ಅಧ್ಯಕ್ಷರು ಅನಂತಕುಮಾರರ ಸಲಹೆಯನ್ನು ಸಮಂಜಸವಾಗಿದೆಯೆಂದು ಮಾನ್ಯಮಾಡಿದರು. ಹಿರಿಯ ಪ್ರಚಾರಕರಾದ ಶ್ರೀ ಅಜಿತಕುಮಾರರ ನೇತೃತ್ವದಲ್ಲಿ ಬರ ಪರಿಹಾರ ಸಮಿತಿಯೊಂದನ್ನು ರಚಿಸಲಾಯಿತು. ಅದರ ಸಂಚಾಲಕರಾಗಿ ನೇಮಕಗೊಂಡ ನಾಲ್ವರಲ್ಲಿ ಅನಂತಕುಮಾರರೂ ಇದ್ದರು.

ಉತ್ತರ ಕರ್ನಾಟಕದ ಬರಪೀಡಿತ ಜಿಲ್ಲೆಗಳಲ್ಲಿ ಸಂಘದ ವತಿಯಿಂದ ನೂರಾರು ಗೋಶಾಲೆಗಳನ್ನೂ ಗಂಜಿಕೇಂದ್ರಗಳನ್ನೂ ತೆರೆಯಲಾಯಿತು. ಮುಂದಿನ ಎರಡು ತಿಂಗಳುಗಳ ಕಾಲ ಅನಂತಕುಮಾರ್ ಈ ಕೇಂದ್ರಗಳ ಮೇಲ್ವಿಚಾರಣೆಯನ್ನು ನಿರಂತರವಾಗಿ ನಿರ್ವಹಿಸಿದರು

ಅನಂತಕುಮಾರರ ಕಾಲೇಜು ವ್ಯಾಸಂಗದ ಜೊತೆಜೊತೆಗೇ ವಿದ್ಯಾರ್ಥಿಪರಿಷತ್ತಿನ ಚಟುವಟಿಕೆಗಳೂ ಸಾಗತೊಡಗಿದವು. 1981ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನ ಅನಂತಕುಮಾರರ ಸಾಮರ್ಥ್ಯವನ್ನು ಬೆಳಕಿಗೆ ತಂದಿತು. 1982ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸಂಘಟನಾ ಕಾರ್ಯದರ್ಶಿಯಾದ ಅನಂತಕುಮಾರ್ ಮೂರು ವರ್ಷಗಳ ಕಾಲ ರಾಜ್ಯದ ಎಲ್ಲೆಡೆ ಸಂಚರಿಸಿ ಪರಿಷತ್ತಿನ ಸಂಘಟನೆಯ ಕಾರ್ಯವನ್ನು ನಿರ್ವಹಿಸಿದರು. ಮುಂದೆ ಅವರನ್ನು ಪೂರ್ಣಾವಧಿ ಕಾರ್ಯಕರ್ತರೆಂದು ನೇಮಕಮಾಡಿಕೊಂಡಮೇಲೆ, ಗ್ರಾಮೀಣ ಬದುಕಿನ ಸಂಕಷ್ಟಗಳು, ಕೃಷಿಕರ ಬವಣೆ, ಯುವಶಕ್ತಿಯ ಆಶೋತ್ತರಗಳಿಗೆ ಅಡ್ಡಿಯಾಗಿರುವ ಆತಂಕಗಳು ಎಲ್ಲವನ್ನೂ ಅಭ್ಯಸಿಸುವ ಅವಕಾಶ ಈ ಸಂದರ್ಭದಲ್ಲಿ ಒದಗಿಬಂದಿತು. ತಳಹಂತದ ಸಮಸ್ಯೆಗಳ ಪರಿಚಯ ಮಾಡಿಕೊಂಡು, ಅವುಗಳ ಪರಿಹಾರಕ್ಕೆ ಪ್ರಯತ್ನಿಸಿದಲ್ಲದೆ ನಾಯಕತ್ವ ಯಶಪಡೆಯಲಾರದೆಂದು ಅವರಿಗೆ ಮನವರಿಕೆಯಾಯಿತು.



ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳೂ ಸಮ್ಮೇಳನಗಳೂ ಅನಂತಕುಮಾರರ ಪ್ರತಿಭೆಯ ಸರ್ವತೋಮುಖ ವಿಸ್ತಾರಕ್ಕೆ ಅನುವುಮಾಡಿಕೊಟ್ಟವು. ಚರ್ಚೆ, ಓದು, ಆಂದೋಲನಗಳಲ್ಲಿ ತೊಡಗಿಕೊಂಡುದರ ಪರಿಣಾಮವಾಗಿ ದೇಶವಿದೇಶಗಳ ದೈನಂದಿನ ವಿದ್ಯಮಾನಗಳ ಅರಿವು ವಿಸ್ತಾರವಾಯಿತು. ರಷ್ಯ ವಿಭಜನೆಯೇ ಇರಲಿ, ಕಾಶ್ಮೀರದ ಸಮಸ್ಯೆಯಾಗಲಿ ಆಯಾ ವಿಷಯದ ಆಳವಾದ ಅಧ್ಯಯನ ಮಾಡಿ ಮಾತನಾಡಬಲ್ಲ ಸಾಮರ್ಥ್ಯ ಬೆಳೆಯಿತು. ಅಸ್ಸಾಂ ಆಂದೋಲನದಲ್ಲಿ ವಿದ್ಯಾರ್ಥಿ ಪರಿಷತ್ತಿನ ಪರವಾಗಿ ಅನಂತಕುಮಾರರ ಪಾತ್ರ ಗಮನಾರ್ಹವಾಗಿತ್ತು. ಅಸ್ಸಾಂ ಆಂದೋಲನದ ಸಮಯದಲ್ಲೇ ಅನಂತಕುಮಾರ್ ಮೊದಲ ಬಾರಿಗೆ ಪೋಲೀಸರ ಲಾಠಿಯೇಟಿನ ರುಚಿ ಕಂಡದ್ದು.

ವೈದ್ಯಕೀಯ ಶಿಕ್ಷಣದ ಸುಧಾರಣೆಯಿಂದ ಹಿಡಿದು ಶೈಕ್ಷಣಿಕ ಸಂಸ್ಥೆಗಳ ಖಾಸಗೀಕರಣದವರೆಗೆ ಯಾವುದೇ ವಿಷಯದ ಪತ್ರಿಕಾಗೋಷ್ಠಿ, ವಿಚಾರಸಂಕಿರಣಗಳಲ್ಲಿ ಅನಂತಕುಮಾರ ಅವರದೇ ಪ್ರಾತಿನಿಧ್ಯ. ವಿಶ್ವವಿದ್ಯಾಲಯಗಳಲ್ಲಿ ಎಡಪಂಥೀಯ ಧೋರಣೆಗಳೋ ಕ್ಯಾಪಿಟೇಶನ್ ಶುಲ್ಕದ ಹೆಚ್ಚಳವೋ ಅಂಥ ಯಾವುದನ್ನೇ ವಿರೋಧಿಸುವ ಕಾರ್ಯಕ್ರಮವಿರಲಿ ಅನಂತಕುಮಾರ್ ಅಲ್ಲಿ ಭಾಷಣಕ್ಕೆ ಸಿದ್ಧ. ಪರಿಷತ್ತಿನ ವಾರ್ಷಿಕ ಸಮ್ಮೇಳನಗಳಲ್ಲಿ ಕರಡುನಿರ್ಣಯಗಳನ್ನು ರಚಿಸಿ ಮಂಡಿಸುವುದೂ ಅವರ ಪಾಲಿನ ಕೆಲಸವೇ.

ಪೂರ್ಣಾವಧಿ ಕಾರ್ಯಕರ್ತರಾಗಿ ಎಲ್ಲ ಕ್ಷೇತ್ರಗಳಲ್ಲೂ ಸುತ್ತಾಡಿದ ಅನಂತಕುಮಾರರಿಗೆ ನಾಡಿನ ಜನಜೀವನದ ವಾಸ್ತವ ಸ್ಥಿತಿಗತಿಗಳ ಸಂಪೂರ್ಣ ಅರಿವು ಉಂಟಾಯಿತು. ಯಾವುದೇ ಊರು ತಲುಪಿದ ತಕ್ಷಣ ತಮ್ಮ ಉಪಯೋಗಕ್ಕೆ ಸಿದ್ಧವಾಗಿರುತ್ತಿದ್ದ ಸೈಕಲ್ಲೊಂದನ್ನು ಎರವಲು ಪಡೆದು ಏರಿ ಊರು ಸುತ್ತುವುದು, ಮನೆಮನೆಗಳಲ್ಲಿ ಜನರ ಸಂಪರ್ಕ, ಪರಿಚಿತ ಕಾರ್ಯಕರ್ತರ ಮನೆಯ ಊಟ- ಇವೆಲ್ಲ ಅವರ ದಿನಚರಿಯ ಭಾಗಗಳಾಗಿದ್ದವು.

ಪರಿಷತ್ತು ಕೈಗೊಂಡ ಹಲವು ರಾಷ್ಟ್ರೀಯ ಆಂದೋಲನಗಳಲ್ಲಿ ರಾಜ್ಯಮಟ್ಟದ ನಾಯಕತ್ವವನ್ನು ಅನಂತಕುಮಾರ್ ಸಮರ್ಥವಾಗಿ ನಿರ್ವಹಿಸಿದರು. 1982ರಲ್ಲಿ ವಿಶ್ವವಿದ್ಯಾನಿಲಯದ ಹಂತದಲ್ಲಿ ಜರುಗಿದ 'ಕ್ಯಾಂಪಸ್ ಉಳಿಸಿ' ಆಂದೋಲನ ಹಾಗೂ 1983ರಲ್ಲಿ ಪರಿಷತ್ತಿನ ವತಿಯಿಂದ ನಡೆಸಲಾದ 'ಅಸ್ಸಾಂ ರಕ್ಷಿಸಿ' ಆಂದೋಲನದ ರಾಜ್ಯ ಸಂಚಾಲಕತ್ವಗಳನ್ನು ಅನಂತಕುಮಾರ್ ವಹಿಸಿಕೊಂಡಿದ್ದರು. 1985ರಲ್ಲಿ ಅಂತಾರಾಷ್ಟ್ರೀಯ ಯುವವರ್ಷದ ಅಂಗವಾಗಿ, ಕರ್ನಾಟಕದಲ್ಲಿ ಅದ್ದೂರಿಯ ಉತ್ಸವದ ನೇತೃತ್ವ ವಹಿಸಿ ಎಲ್ಲರ ಗಮನ ಸೆಳೆದರು. ಇಂಥ ತಮ್ಮ ಕಾರ್ಯಕ್ಷಮತೆಯಿಂದ ಅನಂತಕುಮಾರ್ ಪರಿಷತ್ತಿನ ರಾಷ್ಟ್ರೀಯ ಕಾರ್ಯದರ್ಶಿಯಾಗಿಯೂ (1985) ನೇಮಕಗೊಂಡರು.

ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲಿ ತಾವು ತೊಡಗಿಕೊಂಡಿದ್ದ ಹತ್ತು ವರ್ಷಗಳ ಅವಧಿಯಲ್ಲಿ ಅನಂತಕುಮಾರ್ ಸಾವಿರಾರು ಮಿತ್ರರನ್ನು ಸಂಪಾದಿಸಿದ್ದರು. ಸ್ನೇಹಸಂಪಾದನೆ ಹೇಗೂ ಇರಲಿ, ಆ ಎಲ್ಲ ಮಿತ್ರರನ್ನೂ ದೇಶಸೇವೆಗೆ ಪ್ರೇರೇಪಿಸಿ, ಆ ನಿಟ್ಟಿನಲ್ಲಿ ಬೆಳೆಸಿದ್ದು ಮಹತ್ವದ ಸಂಗತಿ. ಇಂದು ಕರ್ನಾಟಕದ ರಾಜಕಾರಣದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ವಿಶ್ವೇಶ್ವರ ಹೆಗಡೆ ಕಾಗೇರಿ, ಸಿ.ಟಿ.ರವಿ, ಅರವಿಂದ ಲಿಂಬಾವಳಿ, ನಾಗೇಶ್, ರವಿಕುಮಾರ್ ಮೊದಲಾದವರು ಅನಂತಕುಮಾರರ ಗರಡಿಯಲ್ಲಿ ಪಳಗಿದವರೇ.

ಪುಟ 1 ರಿಂದ




ಸಾವಿರಾರು ಭಾರತೀಯ ಎಂಜಿನಿಯರ್‌ಗಳು ವಿಶ್ವದ ಅತ್ಯಾಧುನಿಕ ಚಿಪ್‌ಗಳ ವಿನ್ಯಾಸದಲ್ಲಿ ತಮ್ಮ ಪ್ರತಿಭೆಯನ್ನು ತೋರಿಸುತ್ತಿದ್ದಾರೆ. ಆದರೆ ಈ ಸಾಧನೆ ಒಂದೇ ದಿನದಲ್ಲಿ ನಿರ್ಮಾಣವಾಗಿಲ್ಲ. ಶಿಕ್ಷಣ, ಸಂಶೋಧನೆ, ಕೈಗಾರಿಕೆ, ಮೂಲಸೌಕರ್ಯ ಮತ್ತು ಜಾಗತಿಕ ಸಂಪರ್ಕಗಳಿಗೆ ನಿರಂತರ ಆದ್ಯತೆ ನೀಡಿದ ಫಲವಾಗಿಯೇ ಬೆಂಗಳೂರು ಈ ಮಟ್ಟಕ್ಕೆ ಬೆಳೆದಿದೆ. ಮತ್ತು ಆ ಮೂಲಸೌಕರ್ಯ ಇದ್ದಕ್ಕಿದ್ದಂತೆ ತಾನಾಗಿ ನಿರ್ಮಾಣವಾಗಲಿಲ್ಲ — ಅದರ ಹಿಂದೆ ಸ್ಪಷ್ಟ ದೂರದೃಷ್ಟಿಯುಳ್ಳ ನಾಯಕತ್ವದ ಶ್ರಮವಿತ್ತು.

**ದೂರದೃಷ್ಟಿಯ ನಾಯಕತ್ವ: ಅನಂತಕುಮಾರ್ ಅವರ ನೇರ ಕೊಡುಗೆ**

ಯಾವುದೇ ನಗರದ ಭವಿಷ್ಯವನ್ನು ರೂಪಿಸುವುದು ಕೇವಲ ಸರ್ಕಾರದ ಯೋಜನೆಗಳಿಂದ ಮಾತ್ರವಲ್ಲ; ಭವಿಷ್ಯವನ್ನು ಮುಂಚಿತವಾಗಿ ಊಹಿಸುವ ದೂರದೃಷ್ಟಿಯ ನಾಯಕತ್ವದಿಂದ ಕೂಡ. ಬೆಂಗಳೂರಿನ ಆರು ಬಾರಿಯ ಸಂಸದರಾಗಿದ್ದ ಅನಂತಕುಮಾರ್ ಅವರ ಚಿಂತನೆ ಮತ್ತು ಕಾರ್ಯವೈಖರಿ ಈ ವಿಷಯದಲ್ಲಿ ವಿಶೇಷವಾಗಿ ಗಮನಾರ್ಹ. 1998–99ರಲ್ಲಿ ವಾಜಪೇಯಿ ಸರ್ಕಾರದಲ್ಲಿ ನಾಗರಿಕ ವಿಮಾನಯಾನ ಸಚಿವರಾಗಿದ್ದಾಗ, ಆರ್ಥಿಕ ಉದಾರೀಕರಣಕ್ಕೆ ಪೂರಕವಾಗಿ ವಿಮಾನ ನಿಲ್ದಾಣ ಮೂಲಸೌಕರ್ಯ ಆಧುನೀಕರಣಕ್ಕೆ ಅವರು ಆದ್ಯತೆ ನೀಡಿದ್ದರು. ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಸ್ತಾಪ ಅವರ ಅವಧಿಯಲ್ಲೇ ಮುಂದಿಡಲಾಗಿತ್ತು — ಇದೇ ಮುಂದೆ ಇಂದಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಡಿಪಾಯಕ್ಕೆ ಕಾರಣವಾಯಿತು. ಜಾಗತಿಕ ಟೆಕ್ ಕಂಪನಿಗಳಿಗೆ ಒಂದು ನಗರದ ವಿಮಾನ ಸಂಪರ್ಕ ಎಷ್ಟು ಮುಖ್ಯ ಎಂಬುದನ್ನು ಗಮನಿಸಿದರೆ, ಇದು ನೇರವಾಗಿ ಬೆಂಗಳೂರಿನ ಐಟಿ ಬೆಳವಣಿಗೆಗೆ ಪೂರಕವಾಯಿತು ಎಂಬುದು ಸ್ಪಷ್ಟ.

ಸಾರಿಗೆ ಕ್ಷೇತ್ರದಲ್ಲೂ ಅವರ ಕೊಡುಗೆ ಮಹತ್ವದ್ದು. 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳಿಗೆ ಮೆಟ್ರೋ ಸಾರಿಗೆ ಇರಬೇಕೆಂಬ ನೀತಿಯನ್ನು ಅನಂತಕುಮಾರ್ ರೂಪಿಸಿದ್ದರು, ಮತ್ತು ವಾಜಪೇಯಿ ಸಂಪುಟದಿಂದ ಬೆಂಗಳೂರು ಮೆಟ್ರೋ ಯೋಜನೆಗೆ ಅನುಮೋದನೆ ದೊರಕಿಸಿಕೊಡಲು ಅವರು ಶ್ರಮಿಸಿದ್ದರು. ಇಂದು ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್ ಸಿಟಿಯಂತಹ ಐಟಿ ಕಾರಿಡಾರ್‌ಗಳಿಗೆ ಸಂಪರ್ಕ ಒದಗಿಸುತ್ತಿರುವ "ನಮ್ಮ ಮೆಟ್ರೋ" ಆ ಆರಂಭಿಕ ನಿರ್ಧಾರದ ಫಲ ಎಂಬುದನ್ನು ಮರೆಯುವಂತಿಲ್ಲ. 2001ರಿಂದ 2003ರವರೆಗೆ ಕೇಂದ್ರ ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದಾಗ ಕೂಡ, ನಗರ ಮೂಲಸೌಕರ್ಯ ಯೋಜನೆ ಮತ್ತು ನೀತಿ ನಿರೂಪಣೆಯಲ್ಲಿ ಅವರು ನೇರ ಪಾತ್ರ ವಹಿಸಿದ್ದರು. ವಿಮಾನ ನಿಲ್ದಾಣ, ಮೆಟ್ರೋ ಮತ್ತು ನಗರಾಭಿವೃದ್ಧಿ — ಈ ಮೂರೂ ಖಾತೆಗಳಲ್ಲಿನ ಅವರ ಕೆಲಸ ಒಟ್ಟಾಗಿ ಸೇರಿಯೇ ಬೆಂಗಳೂರನ್ನು ಜಾಗತಿಕ ಕಂಪನಿಗಳು ಆಯ್ಕೆ ಮಾಡಿಕೊಳ್ಳುವಂತಹ ನಗರವನ್ನಾಗಿ ರೂಪಿಸಿತು.

**ಡಿಜಿಟಲ್ ಭಾರತದ ಮುಂಚೂಣಿ ಚಿಂತನೆ**

ಭೌತಿಕ ಮೂಲಸೌಕರ್ಯದ ಜೊತೆಗೆ, ಡಿಜಿಟಲ್ ಮಾಧ್ಯಮದ ಶಕ್ತಿಯನ್ನೂ ಅನಂತಕುಮಾರ್ ಬಹಳ ಮುಂಚಿತವಾಗಿಯೇ ಗುರುತಿಸಿದ್ದರು. ಭಾರತದಲ್ಲಿ ಇಂಟರ್ನೆಟ್ ಇನ್ನೂ ಹೊಸ ಪರಿಕಲ್ಪನೆಯಾಗಿದ್ದ ಕಾಲದಲ್ಲಿಯೇ ತಂತ್ರಜ್ಞಾನವನ್ನು ಸಾರ್ವಜನಿಕ ಜೀವನದ ಭಾಗವನ್ನಾಗಿಸುವ ಅಗತ್ಯವನ್ನು ಅವರು ಮನಗಂಡಿದ್ದರು. 1998ರಲ್ಲಿಯೇ ತಮ್ಮ ಅಧಿಕೃತ ವೆಬ್‌ಸೈಟ್ ಆರಂಭಿಸುವ ಮೂಲಕ ಸಾರ್ವಜನಿಕ ಜೀವನದಲ್ಲಿ ಡಿಜಿಟಲ್ ವೇದಿಕೆಯ ಮಹತ್ವವನ್ನು ಗುರುತಿಸಿದ ಮೊದಲ ಸಾಲಿನ ಜನನಾಯಕರಲ್ಲಿ ಅನಂತಕುಮಾರ್ ಒಬ್ಬರಾಗಿದ್ದರು. ಆ ಕಾಲದಲ್ಲಿ ಇಂಟರ್ನೆಟ್ ಬಳಕೆ ಅತ್ಯಂತ ಸೀಮಿತವಾಗಿದ್ದರೂ, ತಂತ್ರಜ್ಞಾನವೇ ಭವಿಷ್ಯದ ಸಂವಹನದ ಪ್ರಮುಖ ಸಾಧನವಾಗಲಿದೆ ಎಂಬ ದೂರದೃಷ್ಟಿ ಅವರಲ್ಲಿತ್ತು.

## ಅನಂತಕುಮಾರ್ ಅವರ ತಾಂತ್ರಿಕ ದೂರದೃಷ್ಟಿ

1999ರಲ್ಲಿ "ದೇಶ ಮೊದಲು" ಎಂಬ ಆನ್‌ಲೈನ್ ಚರ್ಚಾ ವೇದಿಕೆಯನ್ನು ಆರಂಭಿಸುವ ಮೂಲಕ ರಾಷ್ಟ್ರೀಯ ವಿಚಾರಗಳ ಕುರಿತು ಜನರೊಂದಿಗೆ ಡಿಜಿಟಲ್ ಸಂವಾದ ನಡೆಸುವ ಹೊಸ ಪ್ರಯೋಗಕ್ಕೆ ಅವರು ಚಾಲನೆ ನೀಡಿದರು. ಇ-ಮೇಲ್ ಮೂಲಕ ಸಾರ್ವಜನಿಕರೊಂದಿಗೆ ನಿರಂತರ ಸಂಪರ್ಕ ಸಾಧಿಸುವುದಕ್ಕೂ ಅವರು ವಿಶೇಷ ಆದ್ಯತೆ ನೀಡಿದ್ದರು. ಸಾಮಾಜಿಕ ಜಾಲತಾಣಗಳು ಜನಪ್ರಿಯವಾಗುವ ಮುನ್ನವೇ ಡಿಜಿಟಲ್ ಸಂವಹನವನ್ನು ಪರಿಣಾಮಕಾರಿಯಾಗಿ ಬಳಸಿದ ನಾಯಕರಲ್ಲಿ ಅವರೂ ಒಬ್ಬರಾಗಿದ್ದರು.

2009ರಲ್ಲಿ NationFirst.in ಎಂಬ ಡಿಜಿಟಲ್ ವೇದಿಕೆಯನ್ನು ಆರಂಭಿಸುವ ಮೂಲಕ ರಾಷ್ಟ್ರಾಭಿವೃದ್ಧಿ, ಸಾರ್ವಜನಿಕ ನೀತಿ ಮತ್ತು ರಾಷ್ಟ್ರೀಯ ಚಿಂತನೆಗಳಿಗೆ ಅವರು ಆನ್‌ಲೈನ್ ವೇದಿಕೆಯನ್ನು ರೂಪಿಸಿದರು. ತಂತ್ರಜ್ಞಾನವನ್ನು ಕೇವಲ ಮಾಹಿತಿ ವಿನಿಮಯದ ಸಾಧನವಾಗಿ ಮಾತ್ರವಲ್ಲ, ಸಮಾಜವನ್ನು ಜೋಡಿಸುವ ಶಕ್ತಿಯಾಗಿ ಬಳಸಬೇಕೆಂಬ ಅವರ ದೃಷ್ಟಿಕೋನ ಇಂದಿನ ಡಿಜಿಟಲ್ ಭಾರತದ ಪರಿಕಲ್ಪನೆಯೊಂದಿಗೆ ಹೊಂದಿಕೆಯಾಗುತ್ತದೆ. ವಿಮಾನ ನಿಲ್ದಾಣ, ಮೆಟ್ರೋ, ನಗರಾಭಿವೃದ್ಧಿಯಂತಹ ಭೌತಿಕ ಮೂಲಸೌಕರ್ಯ ಒಂದೆಡೆಯಾದರೆ, ಡಿಜಿಟಲ್ ಸಂವಹನದ ಮುಂಚೂಣಿ ಪ್ರಯೋಗಗಳು ಇನ್ನೊಂದೆಡೆ — ಈ ಎರಡೂ ಆಯಾಮಗಳನ್ನು ಒಟ್ಟಿಗೆ ನೋಡಿದಾಗ, ಅನಂತಕುಮಾರ್ ಒಬ್ಬ "ಭೌತಿಕ ಮತ್ತು ಡಿಜಿಟಲ್ ಮೂಲಸೌಕರ್ಯ ಎರಡನ್ನೂ ಒಟ್ಟುಗೂಡಿಸಿದ ನಾಯಕ" ಎಂಬ ಚಿತ್ರಣ ಸ್ಪಷ್ಟವಾಗುತ್ತದೆ.



**ತಂತ್ರಜ್ಞಾನಕ್ಕೆ ಮೂಲಸೌಕರ್ಯವೇ ಅಡಿಪಾಯ**

ಸೆಮಿಕಂಡಕ್ಟರ್ ಕೈಗಾರಿಕೆ ಬೆಳೆಯಲು ಕೇವಲ ಕಾರ್ಖಾನೆಗಳು ಸಾಕಾಗುವುದಿಲ್ಲ. ಉತ್ತಮ ವಿಮಾನ ಸಂಪರ್ಕ, ವಿಶ್ವಮಟ್ಟದ ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಪ್ರಯೋಗಾಲಯಗಳು, ನಿರಂತರ ವಿದ್ಯುತ್ ಪೂರೈಕೆ, ಉತ್ತಮ ರಸ್ತೆ-ಮೆಟ್ರೋ ಸಂಪರ್ಕ, ವೇಗದ ಡಿಜಿಟಲ್ ಸಂಪರ್ಕ ಹಾಗೂ ಕೌಶಲ್ಯಯುತ ಮಾನವ ಸಂಪನ್ಮೂಲ ಅಗತ್ಯ. ಬೆಂಗಳೂರು ಇಂದು ಜಾಗತಿಕ ತಂತ್ರಜ್ಞಾನ ಕೇಂದ್ರವಾಗಿ ಬೆಳೆದಿರುವುದು ಈ ಎಲ್ಲ ಅಂಶಗಳ ಸಮನ್ವಯದಿಂದಲೇ ಮತ್ತು ಆ ಸಮನ್ವಯದ ಹಿಂದೆ ಅನಂತಕುಮಾರ್ ಅವರಂತಹ ನಾಯಕರ ನಿರ್ಣಯಗಳಿದ್ದವು.

ಅಭಿವೃದ್ಧಿ ಎಂದರೆ ಕೇವಲ ಕಟ್ಟಡಗಳ ನಿರ್ಮಾಣವಲ್ಲ; ಮುಂದಿನ ತಲೆಮಾರಿಗೆ ಅವಕಾಶಗಳನ್ನು ನಿರ್ಮಿಸುವುದು ಎಂಬುದೇ ಅವರ ಚಿಂತನೆಯ ಮೂಲವಾಗಿತ್ತು. ಇಂದು ಭಾರತದ ಯುವಜನತೆಗೆ ಸೆಮಿಕಂಡಕ್ಟರ್ ಕ್ಷೇತ್ರವು ಹೊಸ ಅವಕಾಶಗಳ ಲೋಕವನ್ನು ತೆರೆದಿದೆ. ಚಿಪ್ ವಿನ್ಯಾಸ, ಎಲೆಕ್ಟ್ರಾನಿಕ್ಸ್, ಮೆಟೀರಿಯಲ್ಸ್ ಸೈನ್ಸ್, AI, ಡೇಟಾ ಅನಾಲಿಟಿಕ್ಸ್, ಸೈಬರ್ ಭದ್ರತೆ ಮತ್ತು ಸಂಶೋಧನೆ ಕ್ಷೇತ್ರಗಳಲ್ಲಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗಲಿವೆ. ವಿಶ್ವಮಟ್ಟದ ಕಂಪನಿಗಳು ಭಾರತದಲ್ಲಿ ಹೂಡಿಕೆ ಮಾಡುತ್ತಿರುವುದು ಈ ಕ್ಷೇತ್ರದ ಭವಿಷ್ಯವನ್ನು ಇನ್ನಷ್ಟು ಉಜ್ವಲಗೊಳಿಸಿದೆ.

ಭಾರತದ ಸೆಮಿಕಂಡಕ್ಟರ್ ಯುಗ ಈಗ ಆರಂಭವಾಗಿದೆ. ಇದು ಕೇವಲ ಒಂದು ಕೈಗಾರಿಕೆಯ ಕಥೆಯಲ್ಲ; ಆತ್ಮವಿಶ್ವಾಸಿ, ಸ್ವಾವಲಂಬಿ ಮತ್ತು ಜ್ಞಾನಾಧಾರಿತ ಭಾರತದ ಹೊಸ ಅಧ್ಯಾಯ. ಆ ಹೊಸ ಅಧ್ಯಾಯದ ಯಶಸ್ಸಿಗೆ ದೂರದೃಷ್ಟಿಯ ನಾಯಕತ್ವ, ನಾವೀನ್ಯತೆ ಮತ್ತು ರಾಷ್ಟ್ರಪ್ರಥಮ ಚಿಂತನೆಯೇ ನಿಜವಾದ ಶಕ್ತಿ.

# ಮೌಲ್ಯಾಧಾರಿತ ರಾಜಕಾರಣಿ ರಾಮಚಂದ್ರ ಗೌಡರಿಗೆ ನುಡಿನಮನ



ಮೌಲ್ಯಾಧಾರಿತ ರಾಜಕಾರಣಿ ರಾಮಚಂದ್ರ ಗೌಡರು ಜುಲೈ ೧೪ರಂದು ನಿಧನರಾದರು. ೮೮ ವಸಂತಗಳನ್ನು ಕಂಡವರು. ಸಪೂರ ದೇಹದ, ಬಿಳಿ ಬಣ್ಣದ ಇವರ ಹಣೆಯಲ್ಲಿ ಸದಾ ಬೆಳಗುವ ಕುಂಕಮ- ದಿವ್ಯ ತೇಜಸ್ಸನ್ನು ಉಂಟು ಮಾಡುತ್ತಿತ್ತು. ಜನಸಂಘದ ಕಾಲಘಟ್ಟದಿಂದ ಪಕ್ಷಕ್ಕಾಗಿ ಕಾರ್ಯ ನಿರ್ವಹಿಸಿದ ರಾಮಚಂದ್ರ ಗೌಡರು ಸಮಾಜದ ಶ್ರೇಯೋಭಿವೃದ್ಧಿಗಾಗಿ ದುಡಿದವರು. ಆ ಕಾಲಘಟ್ಟದಲ್ಲಿಯೇ ಇಂಜಿನಿಯರಿಂಗ್ ಪದವೀಧರರು. ರಾಜಕಾರಣ ಎಂಬ ಪದಕ್ಕೆ ದೇಶದ ಶ್ರೇಯೋಭಿವೃದ್ಧಿಯ ವ್ಯಾಖ್ಯಾನವನ್ನು ತಮ್ಮ ನಡೆ-ನುಡಿಗಳಲ್ಲಿ ಅನುಸರಿಸಿದವರು. ಸಮಾಜದ ತಳವರ್ಗದವರನ್ನು ಮುನ್ನೆಲೆಗೆ ತರಲು ಶ್ರಮಿಸಿದವರು.

ಡಾ. ಶ್ಯಾಮಪ್ರಸಾದ ಮುಖರ್ಜಿ ಸ್ಥಾಪಿಸಿದ ಜನಸಂಘದ ಕಾಲದಲ್ಲಿ ಪಕ್ಷದ ತತ್ವ-ಸಿದ್ಧಾಂತಗಳನ್ನು ಅರಿತವರು ವಿರಳವಾಗಿದ್ದರು. ಈಗಿನಂತೆ ಪ್ರಸಾರ-ಪ್ರಚಾರ ಮಾಧ್ಯಮಗಳಿರಲಿಲ್ಲ. ಪತ್ರಿಕೆಯಂತಹ ಮಾಧ್ಯಮಗಳು ಜನಸಂಘವನ್ನು ಸಂಪರ್ಕಿಸುವುದು ತೀರಾ ಕಡಿಮೆ. ಇದೂ ಕರ್ನಾಟಕವಲ್ಲದೇ ಇಡೀ ದೇಶಕ್ಕೂ ಅನ್ವಯವಾಗಿತ್ತು. ಜನಸಂಘದ ಉದಾತ್ತ ಆಶಯಗಳನ್ನು ಮನೆ ಮನೆಗೆ ತಲುಪಿಸಲು ರಾಮಚಂದ್ರ ಗೌಡರು ತಮ್ಮನ್ನು ತೊಡಗಿಸಿಕೊಂಡರು. ಅವರು ಹುಬ್ಬಳ್ಳಿಯಲ್ಲಿ ಇಂಜಿನಿಯರಿಂಗ್ ಓದುವಾಗ ಅಭಾವಿಪದ ಚಟುವಟಿಕೆಯಲ್ಲಿ ನಿರತರಾಗಿದ್ದರು. ಓದು ಮುಗಿದು ಬೆಂಗಳೂರಿಗೆ ಹಿಂತಿರುಗಿದಾಗ ರಾಮಾ ಜೋಯಿಸರು ಅವರನ್ನು ಜನಸಂಘಕ್ಕೆ ಕರೆತಂದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಲಂಪಳ್ಳಿ ವೆಂಕಟರಾವ್, ಅರಕಲಿ ನಾರಾಯಣ, ರಾಷ್ಟ್ರೋತ್ಥಾನದ ಮಧ್ವರಾವ್ ಅವರ ಸಾಂಗತ್ಯ ಲಭಿಸಿತ್ತು. ಇವು ಅವರಲ್ಲಿ ಹುದುಗಿದ್ದ ನಾಡಪ್ರೇಮವನ್ನು ಪ್ರಜ್ವಲನಗೊಳಿಸಿದವು.

ಆಗ ಗೋಡೆಗಳು, ನಡಿಗೆ, ಗುಂಪು, ಸಭೆಗಳೇ ಪ್ರಚಾರದ ಪ್ರಮುಖ ಸಂಪರ್ಕವಾಗಿದ್ದವು. ಜನಮಾನಸದಲ್ಲಿ ಕಾಂಗ್ರೆಸ್ ಬಿಟ್ಟು ಪರ್ಯಾಯ ಆಶಯವಿರಲಿಲ್ಲ ಎಂಬಂತಾಗಿತ್ತು. ನ್ಯಾಯಪರ ವಿವೇಚನೆಯು ಗೌಣವಾಗಿತ್ತು. ಈ ಸಂದರ್ಭದಲ್ಲಿ ಜನಸಂಘದ ಪಕ್ಷದ ಆಶಯವಿರುವ ಗೋಡೆಪತ್ರ ಮುದ್ರಿಸಲು ಇರಲಿ, ಅಂಟಿಸಲು ಯಾರೂ ಸಹಾಯ ಕೊಡದ ಸ್ಥಿತಿ. ಅಂತಹ ಸಂದರ್ಭದಲ್ಲಿ ಎದೆಗುಂದದೆ ಕೈಯಲ್ಲಿದ್ದ ಕಾಸಿನಲ್ಲಿ ಬಿಳಿ ಹಾಳೆ ಖರೀದಿಸಿದರು, ಮನೆಮನೆಗೆ ಹೋಗಿ ಮೈದಾ ಹಿಟ್ಟಿನಿಂದ ಗೋಂದು ತಯಾರಿಸಿ ಕೊಡುವಂತೆ ಬೇಡಿದರು. ಅಲ್ಲಲ್ಲಿ ಇದ್ದಿಲನ್ನು ಕೇಳಿ ತಂದು, ಬಿಳಿಯ ಹಾಳೆಯ ಮೇಲೆ ಜನಸಂಘದ ಚಿಹ್ನೆ ಕಂದಿಲನ್ನು ಚಿತ್ರಿಸಿದರು. ಜೊತೆಗೆ ಆಶಯಗಳನ್ನು ಬರೆದು ಕಂಪೌಂಡ್ ಗೋಡೆಗಳ ಮೇಲೆ ಅಂಟಿಸಿದರು. ಇಡ್ಲಿ-ವಡೆ, ಉಪ್ಪಿಟ್ಟು-ಕೇಸರಿಬಾತು ಇರಲಿ, ಕೊನೆಗೆ ಅರ್ಧ ಕಪ್ ಚಹ ಜನಸಂಘದ ಕಾರ್ಯಕರ್ತನಿಗೆ ಸಿಗುವುದು ದುರ್ಲಭವಾಗಿದ್ದ ಕಾಲದಲ್ಲಿ ಮುಂದೆ ವೈಭವದ ದಿನಗಳಿವೆ ಎಂಬ ಕನಸು ಕಾಣದೇ ಪಕ್ಷ ಕಟ್ಟುವ ಕಾಯಕದಲ್ಲಿ ನಿರತರಾದರು

೧೯೭೧ರ ಕಾಲಘಟ್ಟ. ಬೆಂಗಳೂರು ನಗರ ಪಾಲಿಕೆಗೆ ಚುನಾವಣೆ ಘೋಷಣೆಯಾಗಿತ್ತು. ಜನಸಂಘಕ್ಕೆ ಸಿದ್ಧಾಂತದ ಕಂಬವಿತ್ತೇ ವಿನಾ ಅಭ್ಯರ್ಥಿಗಳಿರಲಿಲ್ಲ. ಜನಸಂಘದಿಂದ ಯಾರೂ ನಿಲ್ಲಲು ಮುಂದೆ ಬರುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಆರ್‌ಎಸ್‌ಎಸ್ ನ ಹಿರಿಯರು, ಸ್ನೇಹಿತರು ಚುನಾವಣೆಗೆ ನಿಲ್ಲುವಂತೆ ರಾಮಚಂದ್ರ ಗೌಡರನ್ನು ಒತ್ತಾಯಿಸಿದರು. ರಾಮಚಂದ್ರ ಗೌಡರು ತಳಮಟ್ಟದಲ್ಲಿ ಎಷ್ಟು ಕೆಲಸ ಮಾಡಿದರೆಂದರೆ, ಆ ಕಾಲದಲ್ಲಿ ಪ್ರಬಲವಾಗಿದ್ದ ಕಾಂಗ್ರೆಸ್‌ನ ಅಭ್ಯರ್ಥಿ ಲಕ್ಷ್ಮಣ್ ಗೌಡರ ಎದುರು ಸೋತು ಹೋದರು.

ಜನಸಂಘ, ನಂತರ ಜನತಾ ಪಕ್ಷ, ಆ ಬಳಿಕ ೧೯೮೦ರಲ್ಲಿ ಉದಯಿಸಿದ ಭಾರತೀಯ ಜನತಾ ಪಕ್ಷದ ತತ್ವಸಿದ್ಧಾಂತಗಳನ್ನು ತಳಮಟ್ಟದಿಂದ ಮುನ್ನಡೆಸಿದವರು ರಾಮಚಂದ್ರ ಗೌಡರು. ಬಿಜೆಪಿ ಬ್ರಾಹ್ಮಣರ ಪಕ್ಷ ಎಂಬ ಸುಳ್ಳುವಾದವನ್ನು ಹಿನ್ನೆಲೆಗೆ ತಳ್ಳಿದವರು ರಾಮಚಂದ್ರ ಗೌಡರು. ಅವರು ಪಕ್ಷ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಿದ್ಧಾಂತಗಳ ಅನುಸರಣೆಯ ಭಾಗವಾಗಿದ್ದರು.




ಕೊಳಗೇರಿಯಲ್ಲಿ ಬರಿಗೈಯಿಂದ ಬೆಳ್ಳಂಬೆಳಗ್ಗೆಯಿಂದಲೇ ಪ್ರಚಾರಕ್ಕೆ ಹೋಗುತ್ತಿದ್ದರು. ಅವರ ಕೈ-ಕಿಸೆಗಳಲ್ಲಿ ನೋಟುಗಳು ಇರುತ್ತಿರಲಿಲ್ಲ. ಅವರ ಒಡನಾಟ ಪಡೆದವರು ಹೇಳುತ್ತಿದ್ದರು: ರಾಮಚಂದ್ರಗೌಡರು ನೋಟುಗಳಿಲ್ಲದೇ ಓಟುಗಳನ್ನು ಸಂಗ್ರಹಿಸಬಲ್ಲರು ಎಂದು. ಪಕ್ಷಗಳಲ್ಲಿ ಇಂತಹ ಪ್ರಾಮಾಣಿಕತೆ, ಬದ್ಧತೆ ಮತ್ತು ನಾಡು ಮುನ್ನಡೆಸುವವವರು ವಿರಳ. ಗೌಡರು ಸ್ವಂತಕ್ಕಾಗಿ ಆಕಾಂಕ್ಷೆಗಳಿಲ್ಲದೇ ನಾಡಿನ-ಪ್ರಜೆಯ ಹಿತಕ್ಕಾಗಿ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸಿದವರು. ಆರು ಬಾರಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಆರಂಭದಲ್ಲಿ ವಿಧಾನಮಂಡಲದಲ್ಲಿ ಬೆರಳೆಣಿಕೆಯ ಸ್ಥಾನಗಳ ನಡುವೆಯೂ ಬಿಜೆಪಿಯ ಕಹಳೆಯನ್ನು ಮೊಳಗಿಸಿದವರು. ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರಾಗಿಯೂ ಸೇವೆ ಸಲ್ಲಿಸಿದವರು.

ಪಕ್ಷ ಸಂಘಟನೆಯಲ್ಲಿ ಸೂಕ್ಷ್ಮವಾಗಿ ವ್ಯವಹರಿಸುತ್ತಿದ್ದ ರಾಮಚಂದ್ರ ಗೌಡರು ಸಜ್ಜನ, ಪಾರದರ್ಶಕ ಮತ್ತು ದೇಶಪ್ರೇಮಿ ರಾಜಕಾರಣಿಗಳನ್ನು ತಂದರು. ಅವರ ಶಕ್ತಿಗಳನ್ನು ಗುರುತಿಸಿದರು. ಎಚ್.ಎನ್. ಅನಂತಕುಮಾರ, ಸುಬ್ಬ ನರಸಿಂಹ(ಸುಬ್ಬಣ್ಣ), ಸುರೇಶ್‌ಕುಮಾರ್ ಅವರಿಗೆ ಶೀಘ್ರವೇ ಉನ್ನತ ಹುದ್ದೆಗಳನ್ನು ನೀಡಿ ಪಕ್ಷದ ಜೊತೆ ಜೊತೆಯಲ್ಲಿ ನಾಡನ್ನು ಕಟ್ಟಿದರು. ಅನಂತಕುಮಾರ ಅವರ ಅಸಾಧಾರಣ ಶಕ್ತಿಯನ್ನು ಅರಿವು ಮೊದಲ ನೋಟದಲ್ಲಿಯೇ ರಾಮಚಂದ್ರಗೌಡರಿಗೆ ತಿಳಿದಿತ್ತು. ಎಂ.ವಿ. ಶೇಷಾದ್ರಿಯವರು ಅನಂತಕುಮಾರ ಅವರನ್ನು ಭಾರತೀಯ ಜನತಾ ಪಕ್ಷದ ಕಾರ್ಯಕ್ಕಾಗಿ ರಾಮಚಂದ್ರ ಗೌಡರ ಬಳಿ ಕಳುಹಿಸಿದ್ದರು. ಅನಂತಕುಮಾರ ಅವರು ಬಿಜೆಪಿಗೆ ಕಾಲಿಡುತ್ತಲೇ ಪಕ್ಷದ ಕರ್ನಾಟಕ ರಾಜ್ಯದ ಪ್ರಧಾನ ಕಾರ್ಯದರ್ಶಿಯಾದರು

ರಾಮಚಂದ್ರ ಗೌಡರು ಚುನಾವಣೆಗೆ ಸ್ಪರ್ಧಿಸಿದ್ದ ಒಂದು ಸಮಯವದು. ಅಲ್ಲಿತನಕ ಅವರು ಗೆಲುವು ಸಾಧಿಸುತ್ತಿದ್ದುದನ್ನು ಕಂಡು, ವಿರೋಧಿಗಳು ಈ ಸಜ್ಜನ ರಾಜಕಾರಣಿಯನ್ನು ಸೋಲಿಸಲೇಬೇಕೆಂದು ಹಠ ತೊಟ್ಟು, ರಾಮಚಂದ್ರ ಗೌಡರ ವಿರುದ್ಧ ಡಾ. ಜಿ. ರಾಮಚಂದ್ರ ಗೌಡ ಎಂಬುವರನ್ನು ನಿಲ್ಲಿಸಿದರು. ಮತದಾರರು ಗೊಂದಲಕ್ಕೆ ಈಡಾಗಲಿ ಎಂಬುದು ವಿರೋಧಿಗಳ ಉದ್ದೇಶ. ಆಗ ಅನಂತಕುಮಾರರದು ಚಾಣಕ್ಷ ನಡೆ. ಮತಕ್ಷೇತ್ರದ ಎಲ್ಲೆಡೆಯೂ ಸಂಚರಿಸಿದ ಅನಂತಕುಮಾರ ಅವರು, ಮತದಾರರಲ್ಲಿ "ಇನೇಶಿಯಲ್ ಇಲ್ಲದ, ಡಾಕ್ಟರ್ ಅಲ್ಲದ ರಾಮಚಂದ್ರಗೌಡರಿಗೆ ಓಟು ಹಾಕಿ ಎಂದು ಪ್ರಚಾರ ಮಾಡಿದರು. ಅನಂತಕುಮಾರ ಅವರ ಚಾಣಕ್ಷ ನಡೆಗೆ ಗೆಲುವಾಗಿ ರಾಮಚಂದ್ರ ಗೌಡರು ಮತ್ತೆ ಎಂಎಲ್‌ಸಿಯಾಗಿ ಆಯ್ಕೆಯಾದರು.

ಅನಂತಕುಮಾರ ಅವರ ಕುರಿತು ರಾಮಚಂದ್ರ ಗೌಡರು ಹೇಳಿರುವ ಮಾತುಗಳ ಕೆಲ ಸಾಲುಗಳಿವು: "ಅನಂತಕುಮಾರ ಅವರೊಂದಿಗಿನ ಒಡನಾಟದ ದಿನಗಳು ಸದಾ ಹಸಿರಾಗಿವೆ. ಅನಂತಕುಮಾರ ಅವರು ಕೇವಲ ನಾಯಕರಲ್ಲ, ಕಾರ್ಯಕರ್ತನಾಗಿ ಆರಂಭಿಸಿ ರಾಷ್ಟ್ರನಾಯಕನಾಗಿ ಬೆಳೆದ ಅಪರೂಪದ ವ್ಯಕ್ತಿತ್ವ. ಅವರ ದೂರದೃಷ್ಟಿ, ಸಂಘಟನಾ ಸಾಮರ್ಥ್ಯ ಮತ್ತು ಕಾರ್ಯಕರ್ತರ ಮೇಲಿನ ವಿಶ್ವಾಸ ಇಂದಿಗೂ ಅನೇಕರಿಗೇ ಸ್ಫೂರ್ತಿಯಾಗಿದೆ. ಅವರೊಂದಿಗೆ ನಡೆದ ಬಂದ ದಿನಗಳು ನನ್ನ ಸಾರ್ವಜನಿಕ ಬದುಕಿನ ಅಮೂಲ್ಯ ನೆನಪುಗಳಾಗಿ ಉಳಿದಿವೆ." ಜನಸಂಘ, ಬಿಜೆಪಿಯಲ್ಲಿ ನಿಸ್ವಾರ್ಥ ಕಾರ್ಯ ಕೈಗೊಂಡು ಆದರ್ಶಯುತ ಬಾಳನ್ನು ಬಾಳಿದ ರಾಮಚಂದ್ರ ಗೌಡರಿಗೆ ಭಾವಪೂರ್ಣ ಶ್ರದ್ಧಾಂಜಲಿ.

# ಆರು ವರ್ಷಗಳ ಸಾರ್ಥಕ ಯಾನ: 'ಅನಂತಪಥ' ಮತ್ತು ಸಾಮಾಜಿಕ ಹೊಣೆಗಾರಿಕೆ




ಸರಿಯಾಗಿ ಆರು ವರ್ಷಗಳ ಹಿಂದೆ, ೨೦೨೦ರ ಜುಲೈ ೨೨ರಂದು 'ಅನಂತಪಥ' ಪತ್ರಿಕೆಯ ಪಯಣ ಆರಂಭವಾಯಿತು. ಪ್ರಕೃತಿಯ ಏರುಪೇರು, ಸಮಾಜದ ಸವಾಲುಗಳು ಹಾಗೂ ಬದಲಾಗುತ್ತಿರುವ ಕಾಲಘಟ್ಟದ ನಡುವೆಯೂ ಸಾರ್ವಜನಿಕರ, ದಾನಿಗಳ ಮತ್ತು ಕಾರ್ಯಕರ್ತರ ನಿರಂತರ ಸಹಕಾರದಿಂದ ಇಂದು ಎಪ್ಪತ್ತೆರಡು ಸಂಚಿಕೆಗಳನ್ನು ಯಶಸ್ವಿಯಾಗಿ ಪೂರೈಸಿ, ೭೩ನೇ ಸಂಚಿಕೆಯನ್ನು ನಿಮ್ಮ ಕೈಗಿಡಲು ನಮಗೆ ಹೆಮ್ಮೆ ಮತ್ತು ಸಂತೋಷವಾಗುತ್ತಿದೆ.

ಪತ್ರಿಕೆಯ ಆರಂಭಿಕ ದಿನಗಳಲ್ಲಿ ಟಿ. ಎಸ್. ಗೋಪಾಲ್ ಅವರ ಅಪಾರ ಪರಿಶ್ರಮ, ವೃತ್ತಿಪರ ವಿನ್ಯಾಸದ ಜೋಡಣೆ ಮತ್ತು ನಿಯಮಿತ ಪ್ರಕಟಣೆಗೆ ಅವರು ರೂಪಿಸಿಕೊಟ್ಟ ಸೂಕ್ತ ಚೌಕಟ್ಟು 'ಅನಂತಪಥ'ಕ್ಕೆ ಗಟ್ಟಿ ಬುನಾದಿ ಹಾಕಿಕೊಟ್ಟಿತು. ಅವರು ಸಿದ್ಧಪಡಿಸಿಕೊಟ್ಟ ಈ ವ್ಯವಸ್ಥಿತ ಮಾದರಿಯೇ ಮುಂದೆ ಅವರ ಅನುಪಸ್ಥಿತಿಯಲ್ಲೂ ಪತ್ರಿಕೆಯನ್ನು ಅಷ್ಟೇ ಶಿಸ್ತು ಹಾಗೂ ಬದ್ಧತೆಯಿಂದ ಮುನ್ನಡೆಸಿಕೊಂಡು ಬರಲು ಸಾಧ್ಯವಾಗಿಸಿದೆ.

ಪ್ರತಿ ಸಂಚಿಕೆಯಲ್ಲೂ ಶ್ರೀ ಅನಂತ್ ಕುಮಾರ್ ಅವರ ಸಾಧನೆಗಳು, ಅವರ ಜೀವನ ಚರಿತ್ರೆ ಮತ್ತು ರಾಷ್ಟ್ರನಿರ್ಮಾಣದ ಚಿಂತನೆಗಳನ್ನು ಅನಾವರಣಗೊಳಿಸುವುದು ಪತ್ರಿಕೆಯ ಪ್ರಮುಖ ಆಶಯ. ಮೊದಲ ಪುಟದಲ್ಲಿ ಆಯಾ ತಿಂಗಳ ವಿಶೇಷ ಕಾರ್ಯಕ್ರಮಗಳ ವರದಿ ಇದ್ದರೆ, ಎರಡನೇ ಪುಟವನ್ನು ಕರ್ನಾಟಕದ ಪುರಾತನ ದೇವಾಲಯಗಳು, ಪರಿಸರ ನೈಸರ್ಗಿಕ ಸಮೃದ್ಧಿಯ ದ್ಯೋತಕವಾದ ವೃಕ್ಷಗಳು ಹಾಗೂ ವಿವಿಧ ಪಕ್ಷಿ ಪ್ರಭೇದಗಳ ಪರಿಚಯಕ್ಕೆ ಮೀಸಲಾಗಿಡಲಾಗಿದೆ. ಮೂರು ಮತ್ತು ನಾಲ್ಕನೇ ಪುಟಗಳಲ್ಲಿ ಟಿ. ಎಸ್. ಗೋಪಾಲ್ ಅವರು ನೂರಾರು ಸಂದರ್ಶನಗಳನ್ನು ನಡೆಸಿ ಸಿದ್ಧಪಡಿಸಿದ ಅನಂತ್ ಕುಮಾರ್ ಅವರ ಜೀವನಾಧಾರಿತ 'ಅನಂತಯಾನ' ಪ್ರಬಂಧ ಸರಣಿ ಪ್ರಕಟವಾಗುತ್ತಿದೆ.

ಐದನೇ ಪುಟದಲ್ಲಿ 'ನಾನು ಕಂಡಂತೆ ಅನಂತಕುಮಾರ್', 'ದೇಶ ಮೊದಲು' ಸಂವಾದಾತ್ಮಕ ಲೇಖನಗಳು, ವ್ಯಕ್ತಿವಿಶೇಷ ಮಾಲಿಕೆ ಹಾಗೂ ಪ್ರಚಲಿತ ವಿಷಯಗಳ ವಿಶ್ಲೇಷಣೆ ಇರುತ್ತದೆ. ನಡುವೆ ಮಕ್ಕಳಿಗಾಗಿ 'ಚಿಣ್ಣರ ಚೇತನ' ವಿಭಾಗವನ್ನು ಸೇರಿಸುವ ಪ್ರಯತ್ನವೂ ನಡೆದಿತ್ತು. ಇನ್ನುಳಿದ ಪುಟಗಳಲ್ಲಿ 'ಅದಮ್ಯ ಚೇತನ' ಸಂಸ್ಥೆಯ ವಿವಿಧ ಸಾಮಾಜಿಕ ಚಟುವಟಿಕೆಗಳ ವರದಿಗಳು ಹಾಗೂ ಕೊನೆಯ ಪುಟದಲ್ಲಿ ಅನಂತ್ ಕುಮಾರ್ ಅವರ ಬದುಕಿನ ವಿವಿಧ ಮೈಲಿಗಲ್ಲುಗಳನ್ನು ಬಿಂಬಿಸುವ ಅಪರೂಪದ ಚಿತ್ರಗಳನ್ನು ಪ್ರಕಟಿಸಲಾಗುತ್ತಿತ್ತು. ಇತ್ತೀಚೆಗೆ ಪ್ರಚಲಿತ ಕಾರ್ಯಕ್ರಮಗಳು ಮತ್ತು ಅನಂತಕುಮಾರ್ ಪ್ರತಿಷ್ಠಾನದ ಚಟುವಟಿಕೆಗಳ ಛಾಯಾಚಿತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.
'ಅನಂತಪಥ' ಕೇವಲ ಒಂದು ನಿಯತಕಾಲಿಕೆಯಷ್ಟೇ ಅಲ್ಲ; ಅದು ಅನಂತ್ ಕುಮಾರ್ ಅವರ ಕರ್ತೃತ್ವ ಶಕ್ತಿ, ವಿಶಿಷ್ಟ ನಾಯಕತ್ವ ಗುಣಗಳು ಹಾಗೂ ಅವರು ನೂರಾರು ಸಮಾಜಮುಖಿ ನಾಯಕರನ್ನು ಬೆಳೆಸಿದ ವೈಖರಿಯನ್ನು ಜನಾಂಗದಿಂದ ಜನಾಂಗಕ್ಕೆ ತಲುಪಿಸುವ ಪ್ರಬಲ ಮಾಧ್ಯಮ.



## ಸಂಪಾದಕೀಯ

### ತೇಜಸ್ವಿನಿ ಅನಂತಕುಮಾರ್

ಭಾರತೀಯ ಮಾದರಿಯ ನಾಯಕತ್ವ ಗುಣಗಳು ಇಂದಿನ ಆಧುನಿಕ ಯುಗದಲ್ಲಿ ಎಷ್ಟು ಪ್ರಸ್ತುತ ಹಾಗೂ ಪರಿಣಾಮಕಾರಿ ಎಂಬುದನ್ನು ಉದಾಹರಣೆ ಸಹಿತ ನಿರೂಪಿಸುವುದು ಈ ಪತ್ರಿಕೆಯ ಮೂಲ ಉದ್ದೇಶವಾಗಿದೆ.

ಸಮಾಜಮುಖಿ ಚಿಂತನೆ, ನಿಸ್ವಾರ್ಥ ಸೇವೆ ಹಾಗೂ ಸಾರ್ವಜನಿಕ ಜೀವನದಲ್ಲಿ ಭಾರತೀಯ ನಾಯಕತ್ವದ ಮೌಲ್ಯಗಳನ್ನು ಯುವಜನತೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಜಾಗೃತಗೊಳಿಸುವುದೇ 'ಅನಂತಪಥ'ದ ಧ್ವಜವಾಹಕ ಉದ್ದೇಶ."
ಪರಿಸರ ಸವಾಲುಗಳು ಮತ್ತು ಪ್ರತ್ಯಕ್ಷ ಅನುಭವ
ಇತ್ತೀಚೆಗೆ ಜೂನ್ ೨೭ರಂದು ಅದಮ್ಯ ಚೇತನ ಸಂಸ್ಥೆಯು ಒಂದೇ ದಿನದಲ್ಲಿ ೨೫,೦೦೦ ಸಸಿಗಳನ್ನು ನೆಟ್ಟು ಹೊಸ ದಾಖಲೆ ಬರೆಯಿತು. ಆದರೆ ದಾಖಲೆಯ ಸಂತಸದ ಬೆನ್ನಲ್ಲೇ ಪರಿಸರದ ಕಠೋರ ವಾಸ್ತವ ನಮಗೆ ಎದುರಾಯಿತು. ನೆಟ್ಟ ಸಸಿಗಳಿಗೆ ಮಳೆಯ ಆಸರೆ ಬೇಕಾಗಿದ್ದ ಮಳೆಗಾಲದಲ್ಲಿ, ಸತತ ೨೦ ದಿನಗಳ ಕಾಲ ಹನಿಯೂ ಮಳೆಯಾಗದಿರುವುದು ಪ್ರಕೃತಿ ವೈಪರೀತ್ಯಕ್ಕೆ ಕನ್ನಡಿ ಹಿಡಿಯಿತು.

ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ ಮಳೆ ಬಂದರೆ ಸಾಕು — ವಾಹನ ದಟ್ಟಣೆ (ಟ್ರಾಫಿಕ್), ವಿದ್ಯುತ್ ಅಭಾವ ಮುಂತಾದ ಕಿರಿಕಿರಿಗಳನ್ನು ನೆನೆದು 'ಮಳೆ ಏಕೆ ಬೇಕು' ಎಂದು ಗೊಣಗುವ ಅಭ್ಯಾಸ ನಮ್ಮಲ್ಲಿತ್ತು. ಆದರೆ, ಈ ಬಾರಿ ಮಳೆಗಾಗಿ ಕಾಯುವ ರೈತನ ತವಕ ಮತ್ತು ಮಳೆ ಕೈಕೊಟ್ಟಾಗ ಎದುರಾಗುವ ಸಂಕಟದ ನೇರ ಅನುಭವ ನಮಗಾಯಿತು. ಪ್ರಕೃತಿಯ ಮುನಿಸಿನ ನಡುವೆಯೂ ಎದೆಗುಂದದೆ ಸಸಿಗಳಿಗೆ ನೀರುಣಿಸುವ ಕಾರ್ಯ ಸಾಗಿದೆ. ಬಿಡಿಎ ನೆರವನ್ನು ನೀಡಿ ಕೊಳವೆಬಾವಿ ತೋಡಿಸಿಕೊಟ್ಟಿದ್ದರಿಂದ ಟ್ಯಾಂಕರ್ ನೀರಿನ ಅನಿವಾರ್ಯತೆ ತಪ್ಪಿತು.

ಆದರೆ ಇಡೀ ಕರ್ನಾಟಕದಾದ್ಯಂತ ರೈತರು ಮಳೆಯಿಲ್ಲದೆ ಕಂಗಾಲಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಇನ್ನೊಂದೆಡೆ, ನೆರೆಯ ಮಹಾರಾಷ್ಟ್ರ ಹಾಗೂ ಮುಂಬೈನಲ್ಲಿ ಅತಿಯಾದ ಮಳೆಯಿಂದ ರಸ್ತೆಗಳು ಕೊಚ್ಚಿಹೋಗಿ, ದೋಣಿಯಲ್ಲಿ ಸಂಚರಿಸುವ ದುಸ್ಥಿತಿ ನಿರ್ಮಾಣವಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮಾನವ ಕುಲ ಎಂತಹ ಸವಾಲುಗಳನ್ನು ತಂದೊಡ್ಡಿಕೊಂಡಿದೆ ಎಂಬುದಕ್ಕೆ ಇದು ಸಾಕ್ಷಿ. ರಾಷ್ಟ್ರೀಯ ಮಟ್ಟದಲ್ಲಿ ಈ ಬಾರಿ ಮುಂಗಾರು ಒಟ್ಟಾರೆಯಾಗಿ ಉತ್ತಮವಾಗಿದ್ದರೂ, ಪ್ರಚಲಿತ ಜಾಗತಿಕ ಮತ್ತು ಸಾಂದರ್ಭಿಕ ಕಿರಿಕಿರಿಗಳ ನಡುವೆಯೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶವು ಪ್ರಗತಿಯತ್ತ ಸಾಗುತ್ತಿದೆ. ಜಾಗತಿಕ ರಂಗದಲ್ಲಿ ಅಮೆರಿಕ-ಇರಾನ್ ಉದ್ವಿಗ್ನತೆ, ನಿಲ್ಲದ ರಷ್ಯಾ-ಉಕ್ರೇನ್ ಯುದ್ಧಗಳು ಜಗತ್ತಿನಲ್ಲಿ ಅನಿಶ್ಚಿತತೆಯನ್ನು ಸೃಷ್ಟಿಸಿವೆ.

ಇದಕ್ಕೆ ಪೂರಕವಾಗಿ ಹವಾಮಾನ ಬದಲಾವಣೆಯು (Climate Change) ತೀವ್ರ ಆತಂಕವನ್ನು ಹುಟ್ಟುಹಾಕಿದೆ. ಸದಾ ಹಿಮಚ್ಛಾದಿತ ಹಾಗೂ ಶೀತಲ ಖಂಡ ಎಂದೇ ಕರೆಯಲ್ಪಡುತ್ತಿದ್ದ ಯುರೋಪ್ ರಾಷ್ಟ್ರಗಳಲ್ಲಿ ಇಂದು ತಾಪಮಾನ ೩೫ ರಿಂದ ೪೦ ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗಿ ಜನರು ತಾಪತ್ರಯಪಡುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಪರಿಸರ ಯಾವ ಸ್ವರೂಪ ಪಡೆದುಕೊಳ್ಳಲಿದೆ ಎಂಬ ಭಯ ಪ್ರತಿಯೊಬ್ಬರನ್ನೂ ಕಾಡುತ್ತಿದೆ. ಈ ಎಲ್ಲಾ ವೈಪರೀತ್ಯಗಳು ಹಾಗೂ ಸವಾಲುಗಳ ಮಧ್ಯೆಯೂ 'ಅದಮ್ಯ ಚೇತನ' ಸಂಸ್ಥೆಯು ತನ್ನ ಧೀಮಂತ ಕಾರ್ಯಕರ್ತರು, ಸಿಬ್ಬಂದಿ ಹಾಗೂ ಉದಾರ ಮನಸ್ಸಿನ ದಾನಿಗಳ ಬೆಂಬಲದಿಂದ ಸಮಾಜಸೇವೆಯನ್ನು ನಿರಂತರವಾಗಿ ಮುನ್ನಡೆಸುತ್ತಿದೆ.

ಇದೇ ಜುಲೈ ೨೨ ಶ್ರೀ ಅನಂತ್ ಕುಮಾರ್ ಅವರ ಅಧಿಕೃತ ದಾಖಲೆಯ ಪ್ರಕಾರ ಜನ್ಮದಿನವಾದರೆ, ಸೆಪ್ಟೆಂಬರ್ ೨೨ ಅವರ ನಿಜವಾದ ಹುಟ್ಟುಹಬ್ಬ—ಹೀಗೆ ವರ್ಷದಲ್ಲಿ ಎರಡು ಬಾರಿ ಹುಟ್ಟುಹಬ್ಬವನ್ನು ಕಾಣುವ ಅಪರೂಪದ ಭಾಗ್ಯ ಅವರದ್ದಾಗಿತ್ತು. ಸಾಮಾನ್ಯ ವ್ಯಕ್ತಿಗಳು ತಮ್ಮ ಸುದೀರ್ಘ ಜೀವಿತಾವಧಿಯಲ್ಲಿ ಸಾಧಿಸುವುದಕ್ಕಿಂತ ಮಿಗಿಲಾಗಿ, ಕೇವಲ ೫೯ ವರ್ಷಗಳ ಅಲ್ಪಾವಧಿಯಲ್ಲೇ ನೂರು ವರ್ಷಗಳಷ್ಟು ಕೆಲಸ ಮಾಡಿ ಮುಗಿಸಿದ ಅವರ ದೀಪ್ತಮಯ ಜೀವನಕ್ಕೆ ಇದು ಪೂರ್ಣವಾಗಿ ಒಪ್ಪುವಂತಹುದೇ. ರಾಷ್ಟ್ರ ಮತ್ತು ರಾಜ್ಯದ ಏಳಿಗೆಗೆ ಅವರು ತೋರಿದ ಮಾರ್ಗ ಎಂದಿಗೂ ಸ್ಮರಣೀಯ. ಪ್ರತಿಯೊಂದು ಕ್ಷಣವೂ ಅವರನ್ನು ನೆನೆಯುತ್ತಾ, ಈ ವಿಶೇಷ ದಿನದಂದು ಅವರಿಗೆ ಭಾವಪೂರ್ಣ ನಮನಗಳು.



**ತಿರುನೆಲ್ವೇಲಿ:** ಶ್ರೀ ಶಾರದಾ ಶಿಕ್ಷಣ ಸಂಸ್ಥೆಗಳು ಹಾಗೂ ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಯ ಜಂಟಿ ಆಶ್ರಯದಲ್ಲಿ ಜುಲೈ 18, 2026ರಂದು ತಿರುನೆಲ್ವೇಲಿಯ ಅರಿಯಾಕುಲಂನಲ್ಲಿರುವ ಶ್ರೀ ಶಾರದಾ ಸಂಸ್ಥೆಯ ಶಾರದಾ ಬ್ಲಾಕ್ ಸೆಮಿನಾರ್ ಹಾಲ್‌ನಲ್ಲಿ 40ನೇ 'ಅನಂತ್ ಪ್ಲೇಟ್ ಬ್ಯಾಂಕ್' ಉಪಕ್ರಮವನ್ನು ಪ್ರಾರಂಭಿಕವಾಗಿ 500 ಸೆಟ್‌ಗಳೊಂದಿಗೆ ಯಶಸ್ವಿಯಾಗಿ ಉದ್ಘಾಟಿಸಲಾಯಿತು. ಪೂಜ್ಯ ಶ್ರೀಮತ್ ಯತೀಶ್ವರಿ ನೀಲಕಂಠಪ್ರಿಯಾ ಅಂಬಾಜಿ ಅವರ ದಿವ್ಯ ನೇತೃತ್ವದಲ್ಲಿ, ಶೂನ್ಯ ತ್ಯಾಜ್ಯ ಹಾಗೂ ಪರಿಸರ ಸ್ನೇಹಿ ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ಇ. ಅರುಣಾಚಲಂ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರೆ, ಶ್ರೀಮತಿ ಮೀನಾಕ್ಷಿ ಹಾಗೂ ಡಾ. ಸ್ವರ್ಣಲತಾ ಅರುಣಾಚಲಂ ಅವರು ಗೌರವಾನ್ವಿತ ಅತಿಥಿಗಳಾಗಿ ಉಪಸ್ಥಿತರಿದ್ದರು.

## ತೇಜಸ್ವಿನಿ ಅನಂತಕುಮಾರ್ ಅವರಿಗೆ 'ಅಕ್ಕಮಹಾದೇವಿ ಪ್ರಶಸ್ತಿ' ಪ್ರದಾನ



ಜುಲೈ 21 ರಂದು ಬೆಂಗಳೂರಿನ ವಿಜಯನಗರದ ಶ್ರೀ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ, ಶ್ರೀ ಬಸವೇಶ್ವರ ಸೇವಾ ಸಮಿತಿ ಹಾಗೂ ಅಕ್ಕನ ಬಳಗ ಮಹಿಳಾ ಸಮಾಜ ಜಂಟಿಯಾಗಿ ಆಯೋಜಿಸಿದ್ದ ಬಸವ, ಅಕ್ಕಮಹಾದೇವಿ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಡಮ್ಯ ಚೇತನ ಸಂಸ್ಥೆಯ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಗೌರವಾನ್ವಿತ 'ಅಕ್ಕಮಹಾದೇವಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಸಿದ್ಧಗಂಗಾ ಮಠದ ಕಿರಿಯ ಶ್ರೀ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮೀಜಿ, ಬೇಲಿ ಮಠದ ಶ್ರೀ ಶ್ರೀ ಶ್ರೀ ಶಿವರುದ್ರ ಮಹಾಸ್ವಾಮೀಜಿ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ, ಶ್ರೀಚೇತನ ಸಭೆ, ಇಕೋ ಅಂಗಡಿ, 40 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರಗಳಿಂದ ಉಚಿತ ಭೋಜನ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

## ಅದಮ್ಯ ಚೇತನ ತಿಂಗಳ ವರದಿ
### ಜೂನ್ -ಜುಲೈ 2026



**ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಶಂಕರ ಭಾರತಿ ಮಹಾಸ್ವಾಮೀಜಿಗಳು, ಜೋಧ್‌ಪುರದ ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿ, ಅದರ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು ಆಶೀರ್ವದಿಸಿದರು.**

## ವಿಜಯಪುರದಲ್ಲಿ ಅದಮ್ಯ ಚೇತನದ 'ಹಸಿರು ಭಾನುವಾರ'





ಪರಿಸರ ರಕ್ಷಣೆ ಮತ್ತು ಹಸಿರು ವಲಯದ ವಿಸ್ತರಣೆಯನ್ನೇ ಕಾಯಕವಾಗಿಸಿಕೊಂಡಿರುವ 'ಅದಮ್ಯ ಚೇತನ' ಸಂಸ್ಥೆಯ 'ಹಸಿರು ಭಾನುವಾರ' ಗಿಡ ನೆಡುವ ಅಭಿಯಾನವು ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ವಿಶೇಷವಾಗಿ ವಿಜಯಪುರದ ಸಕ್ರಿಯ ಕಾರ್ಯಕರ್ತರು ಅತ್ಯಂತ ಉತ್ಸಾಹದಿಂದ ಪ್ರತಿ ವಾರವೂ ಈ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಈ ಪಯಣಕ್ಕೆ ಹೊಸ ಚೈತನ್ಯ ತಂದಿದೆ. ಇತ್ತೀಚೆಗೆ ಶ್ರೀ ಉತ್ತರಾದಿ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರು ಸ್ವತಃ ಸಸಿಯನ್ನು ನೆಟ್ಟು, ನೀರೆರೆದು ಅಭಿಯಾನಕ್ಕೆ ತಮ್ಮ ದಿವ್ಯ ಆಶೀರ್ವಾದವನ್ನು ಅನುಗ್ರಹಿಸಿದ್ದಾರೆ.

ಅನಂತಪಥ
Published by: Tejaswini Ananthkumar
Inputs : | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರ ಸಂಪುಟ )



ಹಸಿರು ಉಳಿಸುವ ಸಂಕಲ್ಪ – ಬಸವನಗುಡಿಯ ಉಮೆನ್ಸ್ ಪೀಸ್ ಲೀಗ್ ಪ್ರೌಢಶಾಲೆಯ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳಿಕೆ



ಮೈಸೂರು ರಸ್ತೆಯ ಗುರು ಶಾಂತಾನಂದ ಶಾಲೆಯ ವಿದ್ಯಾರ್ಥಿಗಳಿಂದ ಸಸಿಗಳಿಗೆ ನಿರಂತರ ನೀರುಣಿಸುವ ಕಾರ್ಯ



ದಯಾನಂದ ಸಾಗರ ಕಾಲೇಜಿನ ವಿದ್ಯಾರ್ಥಿಗಳಿಂದ ಸಸಿಗಳಿಗೆ ನಿರಂತರ ನೀರುಣಿಸುವ ಕಾರ್ಯ



ಪ್ರತಿಯೊಂದು ಸಸಿಗೂ ಜೀವಧಾರೆ – ಚಾಮರಾಜಪೇಟೆಯ ಶಾರದಾ ಸ್ತ್ರೀ ಸಮಾಜ ಶಾಲೆಯ ವಿದ್ಯಾರ್ಥಿನಿಯರ ಜವಾಬ್ದಾರಿಯ ಆರೈಕೆ




ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ತಮ್ಮ ಸ್ಥಾಪನಾ ದಿನದ ಅಂಗವಾಗಿ ಜುಲೈ 9ರಂದು ಬನಶಂಕರಿ 6ನೇ ಹಂತದಲ್ಲಿ ನೆಡಲಾದ ಸಸಿಗಳಿಗೆ ನೀರುಣಿಸಿ, ಅವುಗಳ ಪಾಲನೆ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು



ಹಸಿರಿನ ಸಂರಕ್ಷಣೆಗೆ:ಬಿ.ಎಚ್.ಎಸ್. ಆರ್.ವಿ. ರಸ್ತೆ ಪ್ರೌಢಶಾಲೆಯ ವಿದ್ಯಾರ್ಥಿಗಳ ಕೈಜೋಡಿಕೆ



ಹಸಿರಿನ ಸಂರಕ್ಷಣೆಗೆ ಜಯನಗರದ ಗೀತಾ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಕೈಜೋಡಿಕೆ



ಹನುಮಂತನಗರದ ರಾಜರಾಜೇಶ್ವರಿ ಶಾಲೆಯ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳಿಕೆ



ಸೌತ್ ಎಂಡ್ ಸರ್ಕಲ್‌ನ ವಿಜಯಾ ಪ್ರೌಢಶಾಲೆಯ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳಿಕೆ